5. Sri. D.C. Srikantappa- Member of Parliament, Chickamagalur.

6. Sri. Rajendra Kumar Kataria, IAS-Deputy Commissioner, Chickamagalur.

7. Sri. C.K.Shivanna - Conservator of Forest, Chickamagalur.

8. Sri. Manjunath Naik- Chief executive officer, Zilla Panchayat, Chickamagalur.

9. Sri.Joseph Chally - Director, M/S B.B. Hills Wind Farms Development Pvt.Ltd., Chickamagalur.

ಉ) ಸಾಮಾನ್ಯವಾಗಿ ಪವನ ವಿದ್ಯುತ್ ಘಟಕದ ನಿರ್ವಹಣೆಯು ತಾಂತ್ರಿಕ ಮಟ್ಟದಾಗಿದ್ದು ಸಮಗ್ರ ನಿರ್ವಹಣೆಯನ್ನು ಸ್ವಯಂಚಾಲಿತ ಉಪಕರಣಗಳಿಂದ ನಡೆಸಲಾಗುವುದು. ಆದ್ದರಿಂದ ಮಾನವ ಶಕ್ತಿಯ ಬಳಕೆಯ ಪ್ರಮಾಣವು ಕಡಿಮೆಯಾಗಿರುತ್ತದೆ. ಆದರೂ ಸಹ ಸಾಮಾನ್ಯವಾಗಿ ಪ್ರತಿ ಮೆ.ವ್ಯಾ. ಸಾಮರ್ಥ್ಯದ ಘಟಕದಲ್ಲಿ ಕನಿಷ್ಠ ಪಕ್ಷ ಸರಾಸರಿ 3 ಜನರಿಗೆ ಕೆಲಸ ದೊರೆಯುವ ಸಾಧ್ಯತೆಯಿರುತ್ತದೆ. ಈ ಒಂದು ಸರಾಸರಿಯ ಆದಾರದ ಮೇಲೆ 250 ರಿಂದ 280 ರವರೆಗಿನ ಜನರಿಗೆ ಉದ್ಯೋಗಾವಕಾಶ ಲಭಿಸುತ್ತದೆ.

4790(5628) ಶ್ರೀ ಧರ್ಮೇಗೌಡ ಎಸ್.ಎಲ್.(ಬೀರೂರು):– ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಪ್ರಸಿದ್ಧವಾದ ಐಯ್ಯನಕೆರೆ, ಕೆಮ್ಮಣ್ಣು ಗುಂಡಿ ಹಾಗೂ ಮದಗದಕೆರೆ ಪ್ರದೇಶವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಯೋಜನೆಗಳಿಗಾಗಿ ಪ್ರತಿ ವರ್ಷ ಎಷ್ಟು ಹಣ ಬಿಡುಗಡೆ ಮಾಡಲಾಗುತ್ತಿದೆ;

ಇ) ಈ ಪ್ರದೇಶದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; (ವಿವರ ಒದಗಿಸುವುದು);

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು):

ಅ) ಈ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.